# ಮಹಾಶ್ವೇತಾದೇವಿಯವರ ಸ್ತನದಾಯಿನಿ – ಒಂದು ಅವಲೋಕನ

**ರಾಧಾ ನಾಡಿಗ್**

ಮುಖ್ಯಸ್ಥರು, ಕನ್ನಡ ವಿಭಾಗ,

ಬಿ.ಎಂ.ಎಸ್. ಮಹಿಳಾ ಮಹಾವಿದ್ಯಾಲಯ–ಸ್ವಾಯತ್ತ

ಬಸವನಗುಡಿ, ಬೆಂಗಳೂರು

ಭಾರತೀಯ ಸಂದರ್ಭದಲ್ಲಿ ಬಹುಚರ್ಚಿತ ಹಾಗೂ ಮಹತ್ವದ ಲೇಖಕಿಯಾದ ಮಹಾಶ್ವೇತಾದೇವಿ ಅವರು ಈ ದೇಶ ಕಂಡ ಅಪರೂಪದ ಚಿಂತಕಿ, ಈಶಾನ್ಯ ಭಾರತದ ಆತ್ಮಸಾಕ್ಷಿಪ್ರಜ್ಞೆ, ರಾಷ್ಟ್ರೀಯತೆಯನ್ನು ಪ್ರತಿಪಾದಿಸಿದ ಪ್ರಖರ ನೆಲೆವೀಡಾದ ಬಂಗಾಳದ ಪ್ರತಿಭೆ. ಅವರು ರಾಷ್ಟ್ರೀಯತೆಯ ಸಂಕಥನವನ್ನು ನಿರಚನೆ ಮಾಡುವ ಕಥನಗಳನ್ನು ಸೃಷ್ಟಿಸಿದ್ದು ಇತಿಹಾಸ. ಇಂತಹ ಇತಿಹಾಸದಲ್ಲಿ ಪ್ರವೇಶವನ್ನೇ ಪಡೆಯದಿದ್ದ ಅದೆಷ್ಟೋ ಸಮುದಾಯಗಳನ್ನು ತಮ್ಮ ಸಾಹಿತ್ಯ ಪ್ರಪಂಚದೊಳಗೆ ತಂದವರು. ಅವರಿಗೆ ಸಾಹಿತ್ಯದ ಜವಾಬ್ದಾರಿ ಎಂದರೆ, "ನೈತಿಕತೆಯನ್ನು ಪೊರೆಯುವುದು ಎಂಬ ಬಗ್ಗೆ ಖಚಿತವಾದ ನಿಲುವನ್ನು ಹೊಂದಿದ್ದ ಅವರ ಸಾಹಿತ್ಯ ಈ ಹೊತ್ತು ಸಾರ್ವತ್ರಿಕವಾದುದು."[೧] ಮೌಖಿಕ ಇತಿಹಾಸ, ಜನಕಥೆ, ಜಾನಪದ ಜ್ಞಾನದಲ್ಲಿ ಅಪಾರ ನಂಬಿಕೆ ಹೊಂದಿದ್ದ ಮಹಾಶ್ವೇತಾದೇವಿ ಇವೆಲ್ಲವನ್ನೂ ತಮ್ಮ ಬರಹದಲ್ಲಿ ರೂಢಿಸಿಕೊಂಡಿದ್ದರು. ದೇಶದ ಅತ್ಯುನ್ನತ ಸಾಹಸಿ ಮಹಿಳೆಯರಲ್ಲೊಬ್ಬರಾದ ಝಾನ್ಸಿರಾಣಿ ಕುರಿತ ಅವರ ಚಿತ್ರಣ, ಜನರ ಜತೆಗಿನ ಸಂವಾದದಿಂದಲೇ ಸ್ಫೂರ್ತಿ ಪಡೆದಂತಹದ್ದು. ಇಂತಹ ಪರ್ಯಾಯ ಇತಿಹಾಸದ ಪ್ರಯತ್ನಕ್ಕೆ ಕೈ ಹಾಕಿದ ಅಪರೂಪದ ಹಾಗೂ ಮೊಟ್ಟ ಮೊದಲ ಲೇಖಕಿ ಹಾಗೂ ಹೋರಾಟಗಾರ್ತಿ.

'ಸ್ತ್ರೀ' ಎಂಬ ಪರಿಕಲ್ಪನೆಯನ್ನು ಪುರುಷ ಸಮಾಜ ತನ್ನ ಗ್ರಹಿಕೆಗೆ ತಕ್ಕಂತೆ ವ್ಯಾಖ್ಯಾನಿಸುತ್ತದೆ. ಸಂಸ್ಕೃತಿ ಮತ್ತು ಪ್ರಕೃತಿಗಳ ದ್ವಂದ್ವಾತ್ಮಕ ವರ್ಗೀಕರಣ ಇರುವುದು ಸತ್ಯವಾದರೂ ಮಕ್ಕಳ ಲಾಲನೆ–ಪಾಲನೆ ಮಹಿಳೆಯರಿಗೆ ಪ್ರಾಥಮಿಕ ಕೆಲಸವೆಂಬಂತೆ ಹೊರಿಸುವ ಪುರುಷ ಸಮಾಜ ಸ್ತ್ರೀಯನ್ನು ಪ್ರಕೃತಿಯೊಂದಿಗೆ ಸಮೀಕರಿಸಿದೆ. ಹೀಗೆ ಸ್ತ್ರೀ ಪ್ರಕೃತಿಯ ಸಹವರ್ತಿ ಅಥವಾ ಆಕೆಯೇ ಪ್ರಕೃತಿಯೆಂದು ಕರೆಯುತ್ತಾ, ಮಾನವನ ಸ್ವಭಾವಗುಣಕ್ಕೆ ಹೊರತಾದ ಪ್ರಕೃತಿಯ ಗುಣವನ್ನು ಸ್ತ್ರೀಗೆ ಹೋಲಿಸಿ; ಆ ಗುಣವೇ ಸ್ತ್ರೀ ಸ್ವಭಾವದ ಅಂಗವಾಗಿದೆ ಎಂದು ಪರಿಗಣಿಸಲಾಗುತ್ತಿದೆ.

ಇದೇ ರೀತಿಯಲ್ಲಿ ವಿಜ್ಞಾನ, ಗಂಡು ಎಂದೂ, ಹುಡುಕಿ ತೆಗೆಯುವ ಪ್ರಕೃತಿ ಹೆಣ್ಣೆಂದೂ ಪರಿಗಣಿಸಲಾಗುತ್ತಿದೆ. ಇದರಿಂದ ಗಂಡು ತರ್ಕ ಮತ್ತು ಹೆಣ್ಣು ವಿಚಾರಹೀನತೆ ಎಂಬಂಥ ವಿಧದಲ್ಲಿಯೂ ಅರ್ಥೈಸಲಾಗುತ್ತಿದೆ. ಇದೇ ಮಾದರಿಯಲ್ಲಿ ಫ್ರಾಯ್ಡ್ ಹೇಳುವಂತೆ, 'ಲೈಂಗಿಕ ಅಭಿವ್ಯಕ್ತಿಯಲ್ಲಿ ಗಂಡನ್ನು ಕ್ರಿಯಾತ್ಮಕ ಎಂದೂ, ಹೆಣ್ಣನ್ನು ಸಹಿಸಿಕೊಂಡು ಹೋಗುವ ಗುಣವುಳ್ಳದವಳೆಂದೂ'[೨] ಹೇಳುತ್ತಿದೆ. ಆದರೆ, ಸಾಂಪ್ರದಾಯಿಕವಾಗಿ ಹೀಗೆ ಹೆಣ್ಣನ್ನು ಕ್ರಿಯಾತ್ಮಕತೆಯಿಂದ ಮರೆಮಾಚಿ, ಗಂಡನ್ನು ಮಾತ್ರ ಎತ್ತರಿಸುವುದರ ಮೂಲಕ ಲಿಂಗರಾಜಕಾರಣ ವ್ಯವಸ್ಥೆಗೆ ಪುಷ್ಟಿ ನೀಡಲಾಗುತ್ತಿದೆ. ಹೀಗಾಗಿ ಹೆಣ್ಣು ಗಂಡು

ಎಂಬ ಪರಿಕಲ್ಪನೆಯನ್ನು ಪುರುಷ ಸಂಸ್ಕೃತಿಯ ಸಮಾಜದ ದ್ವಂದ್ವಗಳನ್ನು ಸೃಷ್ಟಿಮಾಡುತ್ತದೆ. ಸಾಂಪ್ರದಾಯಿಕ ವ್ಯವಸ್ಥೆಯು ಗಂಡು ಹೆಣ್ಣಿನ ನಡುವಿನ ಲಿಂಗಭೇದ (Gender)ವನ್ನು ತಪ್ಪಾಗಿ ಅರ್ಥೈಸುವುದರ ಮೂಲಕ ಹೆಣ್ಣಿನ ಅರ್ಥಗ್ರಹಿಕೆಯನ್ನು ಭಿನ್ನವಾಗಿ ಯೋಚಿಸಿದೆ.

ಹೆಣ್ಣಿನ ಅನುಪಸ್ಥಿತಿ, ಆಧುನಿಕ ಮಾನವ ಚರಿತ್ರೆಯ ಪ್ರಗತಿಯ ಪ್ರಕೃತಿಯ ಮೇಲೆ ಹೆಚ್ಚು ಹೆಚ್ಚು ಅಧಿಕಾರ ಸ್ಥಾಪನೆಯ ಕಥೆಯೂ ಹೌದು. ಪ್ರಕೃತಿಯನ್ನು ಪ್ರತ್ಯೇಕಿಸುವ ಸ್ತ್ರೀಯೂ ವಿಜ್ಞಾನ ಯುಗದ ಹೊಸ ಹೊಸ ನಿಯಂತ್ರಣಗಳ ಅಡಿಯಾಳಾಗಬೇಕಾಗಿ ಬಂದರೂ ಅಚ್ಚರಿಯ ಮಾತೇನಲ್ಲ. ಇತರ ಕ್ಷೇತ್ರಗಳಲ್ಲೂ ಸ್ತ್ರೀ ಮತ್ತು ಪ್ರಕೃತಿಗಳು ಪರಸ್ಪರ ಪ್ರತೀಕಗಳಾಗುತ್ತವೆ. ಪ್ರಕೃತಿಯನ್ನು ಸ್ತ್ರೀಯಾಗಿ, ತಾಯಾಗಿ ಕಾಣಲಾಗಿದೆ. ಈ ರೀತಿಯಲ್ಲಿ ಇಂತಹ ವ್ಯಕ್ತಿತ್ವಾರೋಪಣೆ ಸ್ತ್ರೀಯನ್ನು ಅಲೌಕಿಕಗೊಳಿಸಿ, ಪೂಜನೀಯ ಸ್ಥಾನಕ್ಕೆ ಏರಿಸುತ್ತದೆ. ನಿಜಜೀವನದಲ್ಲಿ ಕಷ್ಟ–ಸುಖಗಳನ್ನು ಅನುಭವಿಸುವ ಮನುಷ್ಯಳಾದ ಹೆಣ್ಣನ್ನು ಅದು ಮರೆಮಾಡುತ್ತದೆ. ಆಗ ಅವಳ ಬದುಕು ಅಗೋಚರವಾಗಿಬಿಡುತ್ತದೆ.[೩]

ಸಾಂಪ್ರದಾಯಿಕ ಕುಟುಂಬಗಳಲ್ಲಿ ಗಂಡು ಅಧಿಕಾರ ಕೇಂದ್ರದಲ್ಲಿ ಕಂಡುಬಂದರೆ, ಹೆಣ್ಣು ಕುಟುಂಬದಲ್ಲಿ ಅಧಿಕಾರರಹಿತ ವ್ಯಕ್ತಿಯಾಗಿ ಕಂಡುಬರುತ್ತಾಳೆ. ರೂಢಿಗತ ಮೌಲ್ಯಗಳು "ಗಂಡು ಅಂದರೆ ಅಧಿಕಾರ; ಹೆಣ್ಣು ಅಂದರೆ ಅಧಿಕಾರ ಹೀನಳು"[೪] ಎಂಬಂಥ ನಿರ್ವಚನವನ್ನು ಮಾಡಿವೆ. ಇದೊಂದು ಬಗೆಯ ಪೂರ್ವ ಗ್ರಹೀತ ನಿಲುವು ಎಂಬುದು ಎಲ್ಲರೂ ಒಪ್ಪಬಹುದಾದ ಅಂಶವಾಗಿದೆ. ಇದರಿಂದ ಜಗತ್ತಿನಾದ್ಯಂತ ಎಲ್ಲ ಜನಾಂಗಗಳಲ್ಲೂ ಹೆಣ್ಣು ಶೋಷಣೆಗೆ ಒಳಗಾಗಿರುವುದನ್ನು ತೋರಿಸುತ್ತದೆ ಎಂದು ಪಿತೃಪ್ರಧಾನ ಕುಟುಂಬ ಪದ್ಧತಿಯು ಜಾರಿಗೆ ಬಂದಿತೋ ಅಂದಿನಿಂದ ಸ್ತ್ರೀಯು ತಿರಸ್ಕಾರ, ಶೋಷಣೆ, ಹಿಂಸೆಗಳಿಗೆ ಒಳಗಾಗುತ್ತಾ ಬಂದಿದ್ದಾಳೆ.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪುರುಷ ಅಧಿಕಾರದ ಸಂಕೇತವಾಗುತ್ತಾನೆ. ಯಜಮಾನ, ಸಮರ್ಥ, ಗಂಡೇ ಜವಾಬ್ದಾರಿಯುತ ಎಂದು ಭಾವಿಸಲಾಗುತ್ತದೆ. ಆದರೆ ಹೆಣ್ಣೆಂದರೆ ಅದಕ್ಷತೆ, ದುಡಿಮೆಯ ಸಾಮರ್ಥ್ಯ ಕಡಿಮೆ ಕುಶಲತೆಯ ಕೊರತೆ ಎಂದು ಆರೋಪಿಸುವುದರ ಮೂಲಕ, ಇವುಗಳು ಗಂಡು ನಡೆಸುವ 'ಪಾರುಪತ್ಯ', 'ಯಜಮಾನಿಕೆ'ಯ ಲಿಂಗರಾಜಕಾರಣಕ್ಕೆ ಕಾರಣವಾಗುತ್ತಿವೆ.

ಕುಟುಂಬದ ಅಧಿಕಾರ–ಅಧಿಕಾರೇತ ಪ್ರಕ್ರಿಯೆಗಳಲ್ಲಿ ಸ್ತ್ರೀ ಮಹತ್ತರವಾದ ಜವಾಬ್ದಾರಿಯನ್ನು ಹೊಂದಿರುತ್ತಾಳೆ. ಏಕೆಂದರೆ, 'ಆಧುನಿಕ ಜಗತ್ತಿನ ಕುಟುಂಬದ ಚೌಕಟ್ಟು ತಾಯ್ತನಕ್ಕೆ ಬೇರೆ ರೀತಿಯಲ್ಲಿ ಮಹತ್ವವನ್ನು ಕೊಟ್ಟಿದೆ. ತಾಯಿಯ ಪ್ರೀತಿಯು ಕೇವಲ ಮನೆಯೊಳಗಿನ ವ್ಯವಹಾರವಾಗಿದೆ. ಹಾಗಾಗಿ ಬದಲಾವಣೆಯು ಈ ಸ್ವರೂಪದಲ್ಲಿಯೇ ಆಗಬೇಕಾಗಿದೆ ಎಂದು ಕೆಲವು ಫೆಮಿನಿಸ್ಟರು ವಾದಿಸುತ್ತಾರೆ. ತಾಯ್ತನವನ್ನು ಒತ್ತಾಯಿಸುವ ಪುರುಷ ಸಮಾಜವು ತನ್ನ ದೋಷವನ್ನು ಗಣಿಸದೆಯೇ ಹೆಣ್ಣನ್ನು ಬಂಧನದಲ್ಲಿಡುವುದನ್ನು ಖಂಡಿಸುವ ಕೆಲವು ಮಹಿಳಾ ಚಿಂತಕಿಯರು ಗರ್ಭಧರಿಸುವುದೂ ಬಿಡುವುದೂ ತಮ್ಮ ಹಕ್ಕೆಂದು ವಾದಿಸುತ್ತಾರೆ'[೫] ಇಂತಹ ಸಂಗತಿಗಳನ್ನು ಸ್ತ್ರೀ ಕೇಂದ್ರೀಕರಿಸಿಕೊಂಡು ತನ್ನ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಬೇಕಾಗುತ್ತದೆ. ಆದರೆ ಗಂಡಸರು ಕುಟುಂಬದಲ್ಲಿ 'ಯಜಮಾನಿಕೆ' ಯನ್ನು

ಸ್ಥಾಪಿಸಿಕೊಂಡಿದ್ದರೂ, ತೀವ್ರ ಒತ್ತಡಗಳು ಬಂದಾಗ ಅದನ್ನು ನಿಭಾಯಿಸಲಾರದೆ ಪಲಾಯನವಾದಿಗಳಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ಅವರ ಹೆಂಡತಿಯರು ಇಡೀ ಸಂಸಾರದ ಜವಾಬ್ದಾರಿಯನ್ನು ಕೈಗೆತ್ತಿಕೊಂಡು ಬದುಕನ್ನು ನಿಭಾಯಿಸುತ್ತಾರೆ. ಮಹಾಶ್ವೇತಾದೇವಿ ಅವರು ಬಹುಮುಖ್ಯವಾಗಿ ಗಮನಿಸುವ ಸೂಕ್ಷ್ಮತೆಗಳೆಂದರೆ; 'ಪುರುಷರ ಚಾಂಚಲ್ಯದ ಸ್ವಭಾವ ಮತ್ತು ಸ್ತ್ರೀ ತನ್ನ ಹೊಣೆಗಾರಿಕೆಯನ್ನು ಧೈರ್ಯದಿಂದ ನಿಭಾಯಿಸುವ ಮನೋಧರ್ಮಗಳು'. ಇವು ಅವರ ಸಾಹಿತ್ಯದ ಮುಖ್ಯ ಚರ್ಚಿತ ನೆಲೆಗಳೂ ಆಗುತ್ತವೆ.

ಸ್ತನದಾಯಿನಿ ಕತೆಯ ಪ್ರಾರಂಭದಲ್ಲಿ ಬರುವ ಯಶೋದಾಳ ಪಾತ್ರ ಹೆಣ್ಣಿನ ಮೇಲೆ ಪುರುಷ ಪ್ರಧಾನ ಸಮಾಜ ನಡೆಸುವ ಶೋಷಣೆಗೆ ಹಿಡಿದ ಕನ್ನಡಿಯಾಗಿದೆ. ಇಲ್ಲಿ ಅವಳು ಭಾವನೆಗಳೇ ಇಲ್ಲದ ಯಂತ್ರದಂತೆ ಬಿಂಬಿತವಾಗಿದ್ದಾಳೆ. ರಜಪೂತ ಸಂಸ್ಕೃತಿಯಲ್ಲಿ ಶ್ರೀಮಂತ ಕುಟುಂಬದ ಸ್ತ್ರೀಯರು ತಮಗೆ ಹುಟ್ಟುವ ಮಕ್ಕಳಿಗೆ ಸ್ತನ್ಯಪಾನ ಮಾಡಿಸಿದರೆ ತಮ್ಮ ಸೌಂದರ್ಯ ಕುಂದುವ ಹಾಗೂ ಆರೋಗ್ಯದ ಏರಿಳಿತಗಳ ನ್ಯೂನತೆಗಳಾಗುವ ಕಲ್ಪನೆಯಿಂದ ಹಾಲು ಕುಡಿಸುತ್ತಿರಲಿಲ್ಲ. ಬದಲಿಗೆ ಬೇರೆ ಬಾಡಿಗೆ ತಾಯಂದಿರಿಗೆ ಕೈತುಂಬಾ ಹಣಕೊಟ್ಟು ತಮ್ಮ ಮಕ್ಕಳಿಗೆ ಹಾಲು ಕುಡಿಸಿ ಬೆಳೆಸುತ್ತಿದ್ದರು. ಈ ಕಾರಣಗಳಿಂದಾಗಿ ಕಥಾನಾಯಕಿ ಕಂಗಾಲೀಚರಣನ ಹೆಂಡತಿಯಾದ ಯಶೋದಾ ನಿರಂತರವಾಗಿ ಪತಿಯಿಂದಲೇ ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಳು. "ಪತಿ ಕಂಗಾಲೀಚರಣ ಕೇವಲ ಭೋಗವಸ್ತುವನ್ನಾಗಿ ಪರಿಗಣಿಸಿದ್ದಲ್ಲದೆ ಮಕ್ಕಳನ್ನು ಹೆರುವ ಮಾನವ ಯಂತ್ರವನ್ನಾಗಿ ಪರಿಗಣಿಸಿರುತ್ತಾನೆ. ಕಸದ ತೊಟ್ಟಿಯಲ್ಲಿ ಕೆದಕುವ ಬೀದಿ ನಾಯಿ, ಕಾಗೆಗಳಿಗಿಂತಲೂ ನಿಕೃಷ್ಟವಾಗಿ ಹೆಣ್ಣನ್ನು ಕಾಣುವ ಸ್ವಾರ್ಥ ಸಮಾಜ ಇಲ್ಲಿ ಅನಾವರಣಗೊಳ್ಳುತ್ತದೆ."[೬] ತನ್ನ ದೇಹದ ಮೇಲೆ ಲೈಂಗಿಕ ಹಲ್ಲೆ ಮಾಡುವವರನ್ನು ಕೈಬೀಸಿ ಕರೆಯುವಂತೆ ಮಾಡುವ ಸನ್ನಿವೇಶಗಳು ಆಕೆಯ ಆರ್ಥಿಕ ಅಸಹಾಯಕತೆಯನ್ನು ಬಿಂಬಿಸುತ್ತದೆ. ಹದಿನಾರನೇ ಶತಮಾನಕ್ಕೆ ಜಾರುವಂತಹ ರೂಢಿ ಸಂಪ್ರದಾಯ ಪಂಚಾಂಗಗಳನ್ನು ಚಾಚೂ ತಪ್ಪದೆ ಪರಿಪಾಲಿಸುವ ಮನೆಯಲ್ಲಿ ಇಂತಹ ಅನ್ಯಾಯಗಳು ನಡೆಯುವಾಗ ಲೇಖಕಿಗೆ ಹೆಣ್ಣಿನ ಸ್ಥಾನ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಆಹಾರ ಕದಿಯುವ ಕಂಗಾಲೀಚರಣನ ಶೋಚನೀಯ ಆರ್ಥಿಕ ಸ್ಥಿತಿ ಒಂದೆಡೆಯಾದರೆ, ಆತ ತಯಾರಿಸಿದ ತಿನಿಸುಗಳನ್ನು ಪ್ರಶಂಸುವಲ್ಲಿ ಬ್ರಾಹ್ಮಣರ ಮೂರ್ಖತನದ ಅರಿವಾಗುತ್ತದೆ. ಕಂಗಾಲೀಚರಣನ ಶಾಲಿನ ಮೇಲೆ ಕುದುರೆಗಾಡಿ ಹಾಲ್ದರನ ಮಗ ಸಮಯದಲ್ಲಿನ ಘಟನೆಗಳು ಹಲವು ತಾರತಮ್ಯ ಧೋರಣೆಯನ್ನು ತೋರಿಸುತ್ತದೆ. ಹಾಲ್ದರ್ ಬಾಬುವಿನ ಮನೆಯಿಂದ ಯೋಶದಾಳಿಗೆ ಊಟ ಬರುವ ಕುರಿತು ಆಕೆಯ ಮೇಲೆ ಸಂಶಯದ ಭಾವನೆ ಕಂಗಾಲೀಚರಣ ಮನಸ್ಥಿತಿಯನ್ನು ತೋರಿಸುತ್ತದೆ.

ಆರ್ಥಿಕವಾಗಿ ಸುಭಿಕ್ಷರಾಗಿರುವ ಯಜಮಾನಿ ತನ್ನ ಆರಾಮಕುರ್ಚಿಯಲ್ಲಿ ಕುಳಿತು ತೊಡೆಯಲ್ಲಿ ಆರು ತಿಂಗಳ ಕೂಸನ್ನು ಇರಿಸಿಕೊಂಡಿರುವ ಸನ್ನಿವೇಶವನ್ನು ಲೇಖಕಿ ಸ್ತನದಾಯಿನಿ ಶೀರ್ಷಿಕೆಗೆ ಒಪ್ಪುವಂತೆ ರಚಿಸಿದ್ದಾರೆ. ಬಹುಮಟ್ಟಿಗೆ ವರ್ಷದ ಎಲ್ಲ ತಿಂಗಳಲ್ಲೂ ಒಬ್ಬಳಲ್ಲ ಒಬ್ಬಳು ಸೊಸೆಗೆ ಗರ್ಭ ನಿಲ್ಲುತ್ತದೆ. ಹೀಗಾಗಿ ಯಜಮಾನಿಯ ಮನೆಯ ಕೆಳ ಅಂತಸ್ತಿನಲ್ಲಿ ಸಾಲಾಗಿ ಕಟ್ಟಿಸಿರುವ ಬಾಣಂತಿ ಕೋಣೆಗಳು ಖಾಲಿ ಬೀಳುವ ಸಂದರ್ಭಗಳೇ ಬರುವುದಿಲ್ಲ. ಲೇಡಿ ಡಾಕ್ಟರು, ಜೊತೆಗೆ ಮಿಡ್–ವೈಫ್ ಸರಳಾ ಮನೆ ಬಿಟ್ಟು ಹೋದದ್ದೇ ಇಲ್ಲ. ರಗ್ಗು, ಹಾಸಿಗೆ, ಮೊಲೆಯೂಡುವುದು, ಸ್ಪೂನು, ಬಾಟ್ಲಿ,

ಎಣ್ಣೆ, ಬಟ್ಟೆ, ಪೌಡರ್, ಸ್ನಾನದ ತೊಟ್ಟಿಗಳ ಒಂದು ನಿರಂತರ ವರ್ತುಲ ಇತ್ಯಾದಿ ವರ್ಣನೆಗಳು ಉಳ್ಳವರ ದಬ್ಬಾಳಿಕೆಯನ್ನು ಬಡವರ ಮೇಲಿನ ಶೋಷಣೆಯನ್ನೂ ಕಣ್ಣಿಗೆ ಕಟ್ಟುವಂತೆ ಸೃಷ್ಟಿಸುವಲ್ಲಿ ಕಥಾರಚನೆಯ ಸಾರ್ಥಕತೆಯನ್ನು ಮೆರೆದಿದ್ದಾರೆ. ತನ್ನ ಬದುಕಿನಲ್ಲಿ ಎಷ್ಟೆಲ್ಲ ಕಷ್ಟದ ಏರಿಳಿತಗಳನ್ನು ಕಂಡರೂ ಗಂಡ ಹಾಗೂ ಸಮಾಜದ ಜೊತೆಗೆ ಕ್ರೂರ ದುರ್ವಿಧಿ ಸ್ತನ ಕ್ಯಾನ್ಸರ್ ಎಂಬ ಮಾರಿಯ ರೂಪದಲ್ಲಿ ಆಕೆಯ ಸಂಪೂರ್ಣ ಬದುಕನ್ನು ನಿರ್ನಾಮಗೊಳಿಸಿತು.

ಶ್ರೀಮಂತರು ಬಡವರ ಮೇಲೆ ಮಾಡುವ ಶೋಷಣೆಗಿಂತಲೂ ಪತಿಯಿಂದಲೇ ಶೋಷಣೆಗೆ ಒಳಗಾಗುವ ಸ್ತನದಾಯಿನಿಯರ ಬದುಕು ಶೋಚನೀಯವಾಗಿದೆ. ಒಂದು ಹಾಲು ಕರೆಯುವ ಹಸುವನ್ನು ಕೊನೆಯವರೆಗೂ ಬಳಸಿಕೊಂಡು ಕೊನೆಗೆ ಕಟುಕನಿಗೆ ಕೊಡುವಷ್ಟು ದಾರುಣತೆ ಮನುಷ್ಯರಲ್ಲೂ ಕಂಡುಬರುವಷ್ಟು ಕ್ರೂರಸಮಾಜದ ಚಿತ್ರಣವನ್ನು ಲೇಖಕಿ ಅತ್ಯುತ್ತಮವಾಗಿ ಕಟ್ಟಿಕೊಟ್ಟಿದ್ದಾರೆ. ಮತ್ತೆ ಇಂಜಕ್ಷನ್, ಮತ್ತೆ ಮತ್ತಿನ ನಿದ್ದೆ, ಇಡೀ ಮಾನವ ಕುಲಕ್ಕೆ ಸ್ತನದಾಯಿನಿಯಾದವಳೆಂಬುದನ್ನೂ ಲೆಕ್ಕಿಸದೆ ಇಂತಹ ಭಯಂಕರ ನೋವುಂಟುಮಾಡುವ ಕ್ಯಾನ್ಸರ್ ಹರಡಿಕೊಳ್ಳುತ್ತಲೇ ಇದೆ. ಕೊನೆಗೊಮ್ಮೆ ಯಶೋದಾಳ ಎಡಮೊಲೆ ಒಡೆದು ಲಾವಾರಸ ಉಕ್ಕಿದಂತಾಯ್ತು. ಆ ಕೀವನ ದುರ್ವಾಸನೆ ಹತ್ತಿರ ಹೋಗಲು ಅಸಾಧ್ಯವೆನ್ನುವಂತೆ ಮಾಡಿದ ಸಂದರ್ಭ ಸಹೃದಯ ಕಂಗಳನ್ನ ತೇವಗೊಳಿಸುತ್ತದೆ. ವಿಷಯ ತಿಳಿದ ರಜಪೂತ ಗಂಡಸರು ಸ್ವಲ್ಪ ಹಣನೀಡಿ ಕೈತೊಳೆದುಕೊಂಡರು. ಆದರೆ ನಿರಂತರ ಲೈಂಗಿಕ ದೌರ್ಜನ್ಯವೆಸಗಿ ಅದರಿಂದ ಹಣ ಪಡೆದು ಸುಖಿಸುತ್ತಿದ್ದ ಗಂಡ ಕ್ಯಾನ್ಸರ್ ಇದೆ ಎಂದು ತಿಳಿದಕೂಡಲೇ ಆಸ್ಪತ್ರೆಗೆ ಹೋಗಿ ಅವಳನ್ನು ನೋಡುವ ಸೌಜನ್ಯವನ್ನು ತೋರದ ಕಟುಹೃದಯಿ ಧೋರಣೆಯನ್ನ ಉತ್ತಮವಾಗಿ ಕಟ್ಟಿಕೊಟ್ಟಿದ್ದಾರೆ.

ಯಶೋದ ಭಗವಂತನ ಸೃಷ್ಟಿಯಲ್ಲಿ ಮಿಕ್ಕವರೆಲ್ಲರೂ ತನ್ನಂತೆಯೆ ನಡೆಯುತ್ತಾರೆ ಎಂದು ನಂಬಿದವಳು. ಯಶೋದಳ ಸಾವೆಂದರೆ ಭಗವಂತನ ಸಾವು. ಮಾನವ ಮಾತ್ರರಾದವರು ಈ ಲೋಕದಲ್ಲಿ ಭಗವಂತನೆಂಬಂತೆ ಬಾಳಿದರೆ ಅವಳು ಯಾರಿಗೂ ಬೇಡವಾದಳು. ಅವಳು ಸಾಯಬೇಕಾದದ್ದೇ ಒಂಟಿಯಾಗಿ  ಎಂಬಲ್ಲಿ ಈ ಕಥೆಯು ಸಮಾಜ ಸ್ವಾರ್ಥಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಉನ್ನತಾರ್ಥದಲ್ಲಿ ಮಹಾಶ್ವೇತಾದೇವಿ ಅವರ ಸಾಹಿತ್ಯದ ಹೆಣ್ಣು ಪದಾರ್ಥ ಜೀವಿ. ಪುರುಷ ಪ್ರಧಾನ ಮೌಲ್ಯಗಳನ್ನು ಕೂಡ ಈಕೆ ಸಿಂಗರಿಸಿ ಬಿಡಿಸಬಲ್ಲಳು. ಪ್ರಗತಿಪರ ಚಿಂತಕರು ಇಂತಹ ಹೆಣ್ಣನ್ನು ಪುರುಷಾಧಿಕಾರಕ್ಕೆ ಪೆಟ್ಟು ಬೀಳುವ ಹಾಗೆ ಪರಿವರ್ತಿತವಾಗುವ ತೀವ್ರ ವ್ಯಕ್ತಿಯಾಗಿ ಸ್ವೀಕರಿಸುತ್ತಾರೆ. ಈ ಬಗೆಯ ಮಹಿಳಾ ಪರವಾದ ಬರವಣಿಗೆಯಲ್ಲಿ ಮಹಾಶ್ವೇತದೇವಿಯರ ಚಿಂತನೆಯ ಅಭಿವ್ಯಕ್ತಿಯು ವಿವೇಕದ ನೆಲೆಯನ್ನು ನಿರ್ಮಿಸುತ್ತದೆ.

ಮಹಾಶ್ವೇತಾದೇವಿ ಅವರ ಪಠ್ಯಗಳನ್ನು ಕುರಿತು ಯೋಚಿಸಿದಾಗ ಸ್ತನದಾಯಿನಿ ಕಥೆ ತಕ್ಷಣ ಮನಸ್ಸಿಗೆ ಬರುತ್ತದೆ. ವಾಸ್ತವವಾಗಿ ಇವು ಲಿಂಗೀಯ ಅಸಮಾನತೆಯ ಬಗೆಗಿನ ತಾತ್ವಿಕ ಚೌಕಟ್ಟನ್ನು ವಾಸ್ತವಿಕವಾಗಿ ಪ್ರಯೋಗಾಧಾರಿತ ದತ್ತಾಂಶಗಳಾಗಿ ಎದುರಾಗಿಸುತ್ತವೆ. ಗಂಡು–ಹೆಣ್ಣು ಎಂದರೆ ಪ್ರಕೃತಿ ಹಾಗೂ ಪುರುಷ ಎಂದಷ್ಟೇ ವಿವರಿಸಿದಾಗ್ಯೂ ಸ್ತನದಾಯಿನಿ ಕತೆಯ ಯಶೋದಾಳನ್ನು, ಅವಳ ಶರೀರ ಮತ್ತು ಅವಳನ್ನು ರೂಪಿಸಿದ ಸಂಸ್ಕೃತಿಯ ಪರಸ್ಪರ ಸಂಬಂಧದೊಂದಿಗೆ ನೆಲೆಗೊಳಿಸುವ ಕ್ರಿಯೆ ಕಂಡು ಬರುತ್ತದೆ.

ಪ್ರಕೃತಿ ಮತ್ತು ಪುರುಷನನ್ನು ಏಕೀಕರಣಗೊಳಿಸಿ ನಿರೂಪಿಸುವ ಈ ಕತೆಯಲ್ಲಿ ಅತ್ಯಂತ ವಿಷಾದನೀಯ ವಿರೋಧಾಭಾಸವೂ ಎದುರಾಗುತ್ತದೆ. ಹೆಣ್ಣಿನ ವಿರುದ್ಧದ ನಿಸ್ತ್ರೀಕರಣ ಮತ್ತು ಶರೀರ ನಿರ್ಮಾಣ ಕ್ರಿಯೆಯಲ್ಲಿ ಉದ್ಯುಕ್ತವಾಗಿರುವ ವಿರೋಧಾಭಾಸವು ಭಿನ್ನ ವಿನ್ಯಾಸದಲಿಲ್ಲ. ಹೆಣ್ಣಿನ ಚೈತನ್ಯವನ್ನು ಅವಶ್ಯಕತೆ ಮತ್ತು ಆಚರಣೆಗಳ ಸಾಂಸ್ಕೃತಿಕ ಚಿಂತನೆಯಲ್ಲಿ ಒಳಸೂಚಿಸಿರುವುದೇ ಅತಿ ದೊಡ್ಡ ವ್ಯಂಗ್ಯವಾಗಿದೆ. ಒಂದು ಹೆಣ್ಣು ಆಮೆ ಮರಿ ಹಾಗೆ ಜೀವ ಹಿಡಿದಿರುತ್ತಾಳೆ .'

'ಅವಳ ಜೀವವೇ ಹೋದರೂ ಆಡಿ ತೋರಿಸೊಲ್ಲ.' 'ಹೆಣ್ಣು ಒಳಗೆ ಸುಟ್ಟು ಭಸ್ಮವಾಗಿ ಬಿಡುತ್ತಾಳೆ ' 'ಬೂದಿಯೂ ಚದುರಿಹೋದ ಮೇಲೆ ಮಾತ್ರವೇ ನಾವು ಅವಳ ಗುಣಗಾನವನ್ನು ಮಾಡೋದು'[೬] ಎನ್ನುವಂತಹ ಮಾತುಗಳು ಯಶೋಧಾಳಂತವರನ್ನು ಗಮನಿಸಿಯೇ ಹೇಳಿದ್ದಿರಬೇಕು. ಏಕೆಂದರೆ, ವೃತ್ತಿಯಿಂದಲೇ ತಾಯಿಯಾಗಿರುವ (Professional Mother) ಬಾಬುವಿನ ಮನೆಯ ಸೊಸೆಯಂದಿರಂತೆ ಅಥವಾ ಹೆಣ್ಣುಮಕ್ಕಳಂತೆ 'ಅಮೆಟರ್'ಅಮ್ಮ ಅಲ್ಲದಿದ್ದರೂ, ಅವಳಲ್ಲಿರುವ ಮಾತೃವಾತ್ಸಲ್ಯ ಎಷ್ಟು ಅಗಾಧವಾದುದು ಎಂದರೆ; ತನ್ನ ಮಕ್ಕಳನ್ನು ಕಂಡ ಹಾಗೆಯೇ ತನ್ನ ಗಂಡ ಕಂಗಾಲೀಚರಣನನ್ನು ಅವರು ಕಾಣಬಲ್ಲಳು.. ಅವಳು ತಾನೇ ಸ್ವತಃ ಭೂದೇವಿಯಾಗಿ; ಸಮೃದ್ಧವಾಗಿ ಬೆಳೆದು ತನ್ನ ಅಂಗವಿಕಲ ಗಂಡನಿಗೂ, ಮಕ್ಕಳಿಗೂ ಹೊಟ್ಟೆತುಂಬ ಉಣಬಡಿಸಬೇಕೆಂದು ಆಶಿಸುತ್ತಾಳೆ. ಇವಳಿಗಿರುವ ಈ ರೀತಿಯ ಮಾತೃಹೃದಯ ಈ ಭರತಭೂಮಿಯ ಗುಣಕ್ಕೆ ವಿಶೇಷವಾದುದು, ಅಷ್ಟೊಂದು ಮಹಿಮಾನ್ವಿತವಾದುದು ಅದು.

"ಇಲ್ಲಿ ಹುಟ್ಟಿದ ಎಲ್ಲಾ ಹೆಣ್ಣುಗಳೂ ತಾಯಿಯರೇ ಆಗುತ್ತಾರೆ, ಹಾಗೂ ಹುಟ್ಟಿದ ಎಲ್ಲ ಗಂಡುಗಳೂ ಅತ್ಯಂತ ಪವಿತ್ರವಾದ ಶೈಶವಾವಸ್ಥೆಯಲ್ಲೇ ಮುಳುಗಿ ಇದ್ದು ಬಿಟ್ಟಿರುತ್ತಾರೆ, ಪ್ರತಿ ಗಂಡೂ ದೇವಶಿಶು, ಪ್ರತಿ ಹೆಣ್ಣೂ ದೇವಮಾತೆ"[೭], ಎನ್ನುವ ಈ ಮಾತನ್ನು ಸಾಂಸ್ಕೃತಿಕವಾಗಿ ಆರ್ಷೇಯ ಮಾದರಿಯ ಹಿನ್ನೆಲೆಯಲ್ಲಿ ಅಲ್ಲಗಳೆಯಲಾಗದಿದ್ದರೂ ಸಾರ್ವತ್ರಿಕವಾದ ಮಾತೃತ್ವ ಭಾವನೆಗೆ ವಿಶೇಷಾಧಿಕಾರ ನೀಡಲಾಗಿದೆ. ಆ ಮೂಲಕ ಸಾಂಸ್ಕೃತಿಕ ನಿದರ್ಶನಗಳನ್ನು ಸೂಕ್ಷ್ಮಾತಿಸೂಕ್ಷ್ಮ ಚಿತ್ತದಿಂದ ಹೋಲಿಸ್ಟಿಕ್(ಸಮಗ್ರತಾ) ದೃಷ್ಟಿಯಿಂದ ಮಹಾಶ್ವೇತಾದೇವಿ ಅವರು ಕುತೂಹಲಕಾರಿಯಾಗಿಸುತ್ತಾರೆ. ವ್ಯಕ್ತಿಯ ವರ್ತನೆ, ಕರ್ತವ್ಯ, ಅವಶ್ಯಕತೆ, ಅಧಿಕಾರ, ಲೈಂಗಿಕ ಸಂಬಂಧದ ಸ್ವರೂಪ, ಗಂಡು–ಹೆಣ್ಣಿನ ಬದುಕಿನ ಅವಕಾಶ, ಗುಲಾಮಿತನದ ಸಂತೋಷದ ಘಳಿಗೆ ಇವೆಲ್ಲವನ್ನೂ ಅಧಿಕಾರನಿಷ್ಠ ಸಂಸ್ಕೃತಿಯಲ್ಲಿ ಹೇಗೆ ನಿರ್ದೇಶನಗೊಳ್ಳುತ್ತವೆ ಎಂಬುದನ್ನು 'ಸ್ತನದಾಯಿನಿ' ಕತೆಯಲ್ಲಿ ಅಭಿವ್ಯಕ್ತಿಪಡಿಸುತ್ತಾರೆ.

ಅಷ್ಟೇ ಅಲ್ಲ ಯಶೋಧಳ ವಿಚಾರದಲ್ಲಿ ಬದುಕಿನ ಸನ್ನಿವೇಶಗಳಿಂದ ಸದೃಢವಾಗಿ ಆಕೃತಿಗೊಂಡ ಸಾಂಸ್ಕೃತಿಕ ಮಾಲಾಶ್ರಯದ ಸಂವೇದನೆ ಅಡಗಿದೆ, ಅಂದರೆ, ಸಾಂಸ್ಕೃತಿಕ ಸಂವೇದನೆಯು ಮಹಿಳೆಯರ ಒತ್ತಾಸೆ ಗಳಿಸಿದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸಾವಯವಗಳ ಒಂದು ಸ್ಪಷ್ಟ ಕ್ರೂಢೀಕೃತ ಬಂಧವಾಗಿ ಯಶೋಧ ಕಾಣಿಸಿಕೊಳ್ಳುತ್ತಾಳೆ, ಆಕೆಯ ದೇಹವನ್ನು ಉತ್ಪಾದನೆಯ ಒಂದು ಸಾಧನವಾಗಿ ಬಳಸುವ ಅನಿರ್ಬಂಧವಿಲ್ಲದೇ ಒಬ್ಬ ತಾಯಾಗಬೇಕಾದ, ತನ್ನ ಕುಟುಂಬದ ಜೀವನೋಪಾಯಕ್ಕಾಗಿ ಹಲ್ದರ್ಬಾಬುಗಳ ಶ್ರೀಮಂತ ಕುಟುಂಬದಲ್ಲಿ ಹಾಲುಣಿಸುವ ದಾದಿಯಂತೆ ದುಡಿಯಬೇಕಾದ

DOI: 10.59176
http://www.kristujayantijournal.com/index.php/KJKSP

ಅತ್ಯಂತ ಸಂದಿಗ್ಧತೆ, ದಾರುಣತೆ ಯಶೋಧ ಬದುಕಿನ ಅಸಹಾಯತೆಯನ್ನು ಎತ್ತಿ ಹಿಡಿಯುತ್ತದೆ. ಒಳ್ಳೆ ದೇವರು ಬಂದ ಹಾಗೆ ಬಂದ ನೋಡು! ಇವನಿಗೊಂಚೂರು ಹಾಲು ಕೊಡಮ್ಮ ಸದ್ಯ ಇದರಮ್ಮನಿಗೋ, ರೋಗ ಬಂದಿದೆ–ಒಳ್ಳೆ ಬರಡು ಹೆಣ್ಣು, ಇವನೋ ಬಾಟ್ಲಿ ಮುಟ್ಟೋದಿಲ್ಲ ಯಶೋಧ ಮೊಲೆ ಕೊಟ್ಟಳು. ಮಗು ಸಮಾಧಾನವಾಯಿತು ಯಜಮಾನಿ ಒತ್ತಾಯ ಮಾಡಿ ಯಶೋಧಳನ್ನು ರಾತ್ರಿ ಒಂಭತ್ತು ಗಂಟೆಯವರೆಗೂ ಉಳಿಸಿಕೊಂಡಳು. ಯಶೋಧ ಯಜಮಾನಿಯ ಆ ಮೊಮ್ಮಗನಿಗೆ ಪದೇ ಪದೇ ಮೊಲೆಯುಣ್ಣಿಸಿಯೇ ಉಣ್ಣಿಸಿದಳು ಮೊಲೆ ಕೊಡುತ್ತಿರುವಂತೆಯೇ ಯಶೋಧ ಮಾತು ತೆಗೆದಳು, "ಅಮ್ಮಾ ಯಜಮಾನರು ಏನೇನೋ ಭರವಸೆಗಳನ್ನು ಹೇಳಿದ್ದರು, ಅವರಂತೂ ಹೋದರಲ್ಲ ಅದೆಲ್ಲಾ ಯೋಚನೆ ಮಾಡಿ ಲಾಭ ಇಲ್ಲ. ಆದರೆ ತಾಯಿ, ನಿಮ್ಮ ಆ ಬ್ರಾಹ್ಮಣ ಮಗನಿಗೆ ಎರಡೂ ಕಾಲು ಹೋಯ್ತು. ನನ್ನ ಚಿಂತೆ ಏನೂ ನಾನು ಮಾಡೋಲ್ಲ ಆದರೆ ನನ್ನ ಗಂಡ, ಮಕ್ಕಳು, ಇವರ ಮುಖ ನೋಡಿ ನನಗೆ ಯಾವುದಾದರೂ ಒಂದು ಕೆಲಸ ಕೊಡಿ, ನಿಮ್ಮ ಮನೆ ಅಡಿಗೆ ಕೆಲಸ ಕೊಟ್ಟಿದ್ರೆ ಆಗ್ತಿತ್ತು"[೮]. ಎನ್ನುವಲ್ಲಿ ಯಶೋಧಳ ಅಸಹಾಯಕತೆಯ ಒತ್ತು ವಿಶ್ಲೇಷಣೆಗೆ ಒಳಗಾಗುತ್ತದೆ.

ಇಲ್ಲಿ ಯಶೋದಳ ಬದುಕಿನ ತೀವ್ರ ವಾಸ್ತವಗಳು ತೀರಾ ಲಘುತ್ವವನ್ನು ಪಡೆದುಕೊಂಡಿಲ್ಲ. ಅಂದರೆ, ಬದುಕಿನ ಅಗತ್ಯತೆಯಲ್ಲಿ ಹಂಗಿಲ್ಲದ ಸ್ಥಿತಿಯು ಸರಳವಾಗಿ ಸಿಗುವುದೂ ಇಲ್ಲ ಎನ್ನುವ ನಿಲುವು ಮಹಾಶ್ವೇತಾ ಅವರ ಇಂತಹ ಕಥೆಗಳಲ್ಲಿ ಗ್ರಹಿತವಾಗುತ್ತದೆ. ಅದೇ ರೀತಿ ತನ್ನ ದೇಹವನ್ನು ಹೊಟ್ಟೆಪಾಡಿನ ಸಾಧನವೆಂಬುದಕ್ಕಿಂತ ಮಹತ್ತರವಾಗಿ 'ಜೀವನಾರ್ಥ' ಮತ್ತು 'ಪೌಷ್ಠಿಕತೆಯ ಮೂಲ'ವಾಗಿ, 'ಜೀವನ ಶಕ್ತಿದಾಯಕ'ವಾಗಿ ಎದುರುಗೊಳ್ಳುವ ಭೌತಿಕ ಬದುಕಿನ ದರ್ಶನ ಹಾಗೂ ಸಾಧನ ಎಂಬಂತೆ ಆಕೆ ಕಾಣುತ್ತಾಳೆ ಎನ್ನುವುದನ್ನು 'ಸ್ತನದಾಯಿನಿ' ಕತೆಯ ಈ ಮಾತುಗಳಲ್ಲಿ ಗಮನಿಸಬಹುದು. "ಯಶೋಧ ಈ ಮಕ್ಕಳಿಗೆಲ್ಲ ಮೊಲೆ ತಾಯಿಯಾಗಿ ಬಿಟ್ಟರೆ! ಅವಳಿಗೆ ಒಂದಿಷ್ಟು ಊಟ, ಹಬ್ಬಕ್ಕೆ ಬಟ್ಟೆ, ತಿಂಗಳಿಗೊಂದಿಷ್ಟು ದುಡ್ಡು ಕೊಟ್ಟರೂ ಸಾಕು ."[೯]

'ತನ್ನ ಮೊಲೆಗಳೆಂದರೆ ಎಷ್ಟು ಬೆಲೆಬಾಳುವಂತಹವು ಎಂದು ಉಬ್ಬಿದಳು....'

'ನೋಡ್ರೀ ನಮ್ಮೆಲ್ಲಾ ಭಾರವನ್ನೂ ನನ್ನ ಇದರಿಂದಲೇ ನಾನು ಹೊರಲಿದ್ದೇನೆ. ಇದನ್ನು ಎಷ್ಟು ಜೋಪಾನವಾಗಿ ಬಳಸಬೇಕು ಅನ್ನೋದನ್ನ ನೀವೇ ಯೋಚನೆ ಮಾಡಿ' ಎಂದು ಯಶೋಧ ಹೇಳುವಾಗ ಚರಣನಿಗೆ ರಾತ್ರಿಯಲ್ಲಿ ಮೊದಮೊದಲಿಗೆ ಬೇಸರವೇ ತುಂಬ ಬಂದಂತಾಯ್ತು. ಆದರೆ ಆ ದೊಡ್ಡ ಮನೆಯಿಂದ ಬರಲಿರುವ ಅಕ್ಕಿ, ಎಣ್ಣೆ, ತರಕಾರಿಗಳ ರಾಶಿಯನ್ನು ಕಲ್ಪಿಸಿಕೊಳ್ಳುತ್ತಿದ್ದಂತೆ ಅವನಲ್ಲಿ ತುಂಬಿದ್ದ ಗೋಪಾಲಭಾವ ಕರಗಿ ಹೋಯ್ತು. ಆ ಸೃಷ್ಟಿಕರ್ತ ಬ್ರಹ್ಮನ ಜಾಣತನವನ್ನು ನೆನೆದು ರೋಮಾಂಚಿತನಾದ. ಯಶೋಧಳಿಗೆ ಆ ಅದ್ಭುತವನ್ನು ಹೀಗೆ ವಿವರಿಸಿದ. ನೋಡು ನಿನ್ನ ಎದೆಯಲ್ಲಿ ಹಾಲಿರಬೇಕು. ಅಂದ್ರೆ ನಿನ್ನ ಹೊಟ್ಟೆಯಲ್ಲಿ ಮಗು ಇರಬೇಕು.

ಅದನ್ನು ಯೋಚಿಸಿ ಈಗಿನ ಕಷ್ಟವನ್ನು ಸಹಿಸಲೇ ಬೇಕಲ್ಲವೇ ನೀನಂತೂ ಬಹಳ ಒಳ್ಳೆ ಹೆಂಡತಿ ಸಾಕ್ಷಾತ್ ದೇವಿ, ಸ್ವತಃ ಬಸಿರನ್ನೂ ಹೊತ್ತಿದ್ದೀಯಾ, ಒಳಗೆ ಒಂದು ಮಗುವನ್ನು ಹೊತ್ತಿದ್ದ ಹಾಗೇ, ನಿನ್ನ ಎದೆಹಾಲಿನಿಂದ ಇನ್ನೊಂದು ಮಗುವನ್ನು ಸಾಕ್ತಾನೂ ಇದ್ದೀಯ ಇದಕ್ಕೆ ಅಲ್ವಾ, ಆ ತಾಯಿ ನಿನ್ನ – ಕನಸ್ಸಿನಲ್ಲಿ ಮಿಡ್ವೈಫ್ ಆಗಿ ಬಂದು ಕಾಣಿಸಿಕೊಂಡದ್ದು,

ಎನ್ನುವ ಈ ಮಾತುಗಳಲ್ಲಿ, ಪುರುಷ ಪ್ರಧಾನ ಸಾಮಾಜಿಕ ಸಂಸ್ಕೃತಿಯಲ್ಲಿ ಮಹಿಳೆಯನ್ನು ಭೂಮಿಯು ಚರಾಚರ ಶಕ್ತಿಕ್ರಿಯೆಯ ಸಂಕೇತವಾದ್ದರಿಂದ ಭೂಮಿ = ಫಲವಂತಿಕೆ – ಮೃದುತ್ವ – ಮಾತೆ – ಪಕೃತಿ – ಪ್ರೀತಿ – ಸಹನೆ ಸತ್ಯ ಮುಂತಾದ ಅಭ್ಯಾಸಗಳಲ್ಲಿ ಪ್ರಸ್ತುತ ಸಾಮಾಜಿಕ ಬದುಕನ್ನು ಅದರ ಹಿನ್ನೆಲೆಯಲ್ಲಿ ಗಮನಿಸಲಾಗುತ್ತದೆ.

ಅನಾದಿ ಕಾಲದಿಂದಲೂ, ಇಂದಿನವರೆಗೆ ಹೆಣ್ಣು 'ಪುರುಷ ಯಜಮಾನತೆ' 'ಸಮಾಜ'ದ ಇಂತಹ ಕಟ್ಟುಪಾಡುಗಳನ್ನು ಆಕೆಯ ಮೇಲೆ ಪ್ರತಿಪಾದಿಸುತ್ತಾ ಬರಲಾಗಿದೆ. ಆ ಮೂಲಕ ಆಕೆಯನ್ನು ಶಕ್ತಿಯ ಪ್ರತೀಕವಾಗಿಸಿತ್ತು. ತನ್ನ ಸ್ವಾರ್ಥತೆಯನ್ನು ಮತ್ತೊಂದು ಮಜಲಲ್ಲಿ ಪೂರೈಸಿಕೊಳ್ಳಲಾಗುತ್ತದೆ ಎನ್ನುವ ವಿಶೇಷ ಪರಿಣಯ ಮಾತುಗಳಾಗಿ ಮೇಲಿನ ಸಾಲುಗಳು ಸಲ್ಲುತ್ತವೆ.

ಆದರಲ್ಲೂ ಅಧಿಕಾರದ ಸ್ವರೂಪವನ್ನು ಕುರಿತ ಶೋಧನೆಯೇ ತಾತ್ವಿಕತೆಯ ಈಗಿನ ಅತ್ಯುತ್ತಮ ಸಾಧನವಾಗಿ ಗುರುತಿಸಲಾಗುತ್ತದೆ, ಆದರೆ ಮನುಷಾಧಿಕಾರಕ್ಕೆ ಇರುವ ಅಸಂಬದ್ಧತೆ, ಶೃಂಗಾರ, ತೀವ್ರ ಅನೈತಿಕತೆಯನ್ನು ಕಂಗಾಲೀಚರಣನ ಈ ಮೇಲಿನ ಮಾತುಗಳು ಲೌಕಿಕವಾಗಿ ಓದುಗರ ಮುಂದೆ ಟಿಪ್ಪಣಿಯಾಗಿಸಬಲ್ಲವು. ಮಹಾಶ್ವೇತಾ ಅವರ ಬರಹಗಳಲ್ಲಿ ಶೋಧಿಸುವುದು ಈ ಬಗೆಯ ಮನೋಧರ್ಮವನ್ನೇ ಆದರೂ ಇದೊಂದು ಪ್ರಮುಖ ವಸ್ತು ಎನ್ನುವುದನ್ನು ಪ್ರತ್ಯೇಕಿಸುವಂತಹ ಅಗತ್ಯತೆ ಇಲ್ಲಿ ಇಲ್ಲ. ಏಕೆಂದರೆ, ಮರುಷಾಧಿಕಾರವೇ ಅಂತಿಮವಾಗಿ ಶಿಥಿಲವಾಗುವುದನ್ನು ಮಹತ್ವದ ಸಾಂಸ್ಕೃತಿಕ ಆದರ್ಶವಾಗಿ ಮಹಾಶ್ವೇತಾದೇವಿ ಕಂಡರಿಸುತ್ತಾರೆ.

ಆದರೆ ಇದಕ್ಕೆ ಪೂರಕವಾದ ದಿಕ್ಕಿನಲ್ಲಿ ಮಂಡಿಸುವ ರಾಜಕೀಯ ದೃಷ್ಟಿಕೋನಗಳೂ ಅಧಿಕಾರಿ ಸ್ವರೂಪದ ಮುಖ್ಯಧಾರೆಗಳನ್ನು ಮಾನಸಿಕ ಅಭ್ಯಾಸಿಗಳಿಗಿಂತ ಬೇರೆಯಾದದ್ದನ್ನೇ ಹೇಳುತ್ತವೆ. ಅಂದರೆ ಈ ಹಿಂದೆ ಪ್ರಸ್ತಾಪಿಸಿದಂತೆ ಆಂಟೋನಿಯೋ ಗ್ರಾಂಶಿ, ಮಿಶೆಲ್ ಫುಕೋ ಅವರು ಪ್ರತಿಪಾದಿಸಿದ ಅಧಿಕಾರದಿಂದ ನಿಯಂತ್ರಣಗೊಳ್ಳುವ ಧ್ಯಾನತೆಯು ಮಹಾಶ್ವೇತ ಅವರ ಕತೆಗಳಲ್ಲಿ ಶೋಧಿಕವಾಗುತ್ತದೆ. ಇಲ್ಲಿ "ಈ ಮೊಲೆ ತೊಟ್ಟುಗಳಲ್ಲಿ ಹೇಗೆ ಆಟವಾಡ್ತಿದ್ರಿ ನೀವು. ಅದಿಲ್ಲದೆ ನಿಮಗೆ ನಿದ್ದೇನೇ ಬರುತ್ತಾ ಇರಲಿಲ್ಲ. ನನ್ನ ಮಡಿಲು ಬರಿದಾಗಿದ್ದದ್ದು ಎಂಬುದೇ ಇಲ್ಲ. ಒಂದು ಮೊಲೆ ಬಿಡೋ ಹೊತ್ತಿಗೆ ಇನ್ನೊಂದು ಸಿದ್ಧ. ಆಮೇಲೆ ಯಜಮಾನರ ಮನೆ ಮಕ್ಕಳು ನನಗೆ ತಾನೇ ಅದು ಹೇಗೆ ಆಗ್ತಿತ್ತು ಅಂತ ಈಗ ಆಶ್ಚರ್ಯವಾಗುತ್ತೆ"[೧೦] ಎನ್ನುವ ಈ ಮಾತುಗಳು ವ್ಯಾವಹಾರಿಕ ಸತ್ಯಕ್ಕೆ ಬಳಕೆಯಾಗುವ ಉಪಮೆಗಳಾಗಿ ಮುಂದುಬೀಳುತ್ತವೆ. ಅಂದರೆ, ಸೌಂದರ್ಯ–ಕುರೂಪ ಬಲ–ದುರ್ಬಲ, ಒಳಿತು–ಕೆಡುಕು, ಅಧಿಕಾರ–ಶರಣಾಗತಿ, ಸತ್ಯ–ಅಸತ್ಯ ಹೀಗೆ ಎಲ್ಲವೂ ಯಶೋಧಳ ಮಾತುಗಳಲ್ಲಿ ಅಧಿಕಾರದ ವಿಚಿತ್ರ ರೀತಿಯ ಅಡಿಪಾಯವನ್ನು ಅಲ್ಲಾಡಿಸುವಂತಿವೆ. ಅವು ಅಧಿಕಾರದ ಆತ್ಮವಿನಾಶಕಾರಿ ಆತಂಕಗಳನ್ನು ಅದಕ್ಕೆ ಎದುರಾಗುವ ಅಧೀರತೆಯ ಸ್ಥಿತಿಯನ್ನು ದರ್ಶಿಸುತ್ತವೆ.

ಮಹಾಶ್ವೇತ ಅವರ ಬರಹಗಳಲ್ಲಿ ಪ್ರಭುತ್ವ–ಅಧಿಕಾರ ಎಂಬುದು ಅತಿದೊಡ್ಡ ಹಿಂಸಾಮೂಲವಾಗಿ ಕಂಡು ಬರುತ್ತದೆ. ಅದು ಆರ್ತತೆ ವ್ಯಗ್ರತೆಯ ನಡುವೆ ಪರಿವರ್ತನಾಶೀಲ ಶಕ್ತಿಯ ಬಗೆಗೆ ಪೂರ್ಣ ವಿಶ್ವಾಸವನ್ನು ಪಡೆದಿರುತ್ತದೆ. ಆ ಕಾರಣಕ್ಕಾಗಿಯೇ ಮಹಾಶ್ವೇತ ಅವರ ಬರವಣಿಗೆಗಳಲ್ಲಿ ವಿಷಾದ ತುಂಬಿದೆ. ಅದು ಮಹಿಳಾವಾದದ ಮತ್ತೊಂದು ರೂಪವೂ ಹೌದು. ಆಳುವವರ ಮತ್ತು ಆಳಿಸಿಕೊಳ್ಳುವವರ ಮನಸ್ಥಿತಿ ಮತ್ತು ಸಾಂಸ್ಕೃತಿಕ ರಚನೆಯ ಗುಣ – ಇಲ್ಲಿ ಪ್ರಧಾನ. ಆದರೂ

ಪ್ರಜ್ಞಾಸ್ತರದೊಂದಿಗೆ ಇರುವ ಸುಪ್ತಕ್ಕೆ ಸಂದಿಗ್ಧತೆಯ ಹಿಂದಿರುವ ವಾಚ್ಯದ ವ್ಯಂಗ್ಯಕ್ಕೆ ಮಹಾಶ್ವೇತಾ ಅವರ ಬರವಣಿಗೆ ಎದುರಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

**ಕೊನೆ ಟಿಪ್ಪಣಿ ಹಾಗೂ ಪರಾಮರ್ಶನ ಗ್ರಂಥಗಳು:**


೧. ತಾರಿಣಿ ಶುಭದಾಯಿನಿ, ಮಹಾಶ್ವೇತಾದೇವಿ ಕನ್ನಡದಲ್ಲಿ(ಅಂಕಣ ಬರಹ) ಪು:೦೧

೨. Freud Sigmund, ೧೯೩೮, ಪು ೫೯೭–೯೮: ಉದ್ಧೃತ: ಕೇಶವ ಶರ್ಮ ಕೆ, ಶಬ್ದರೇಖೆ, ಪು:೫೯

೩. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ., ತೇಜಸ್ವಿನಿ ನಿರಂಜನ., ೨೦೧೪., ಅಭಿನವ ಪ್ರಕಾಶನ., ಬೆಂಗಳೂರು, ಪು:೨೧

೪. ಉದ್ಧೃತ: ರಾಜೇಂದ್ರ ತಗಡ್ಲಿ, ಶಿವರಾಮ ಕಾರಂತರ ಕಾದಂಬರಿಗಳು ಸ್ತ್ರೀ ಸಂಕಥನದ ಸ್ವರೂಪ, ಪು:೧೭೫

೫. ಕ್ರಿಯೆ ಪ್ರತಿಕ್ರಿಯೆ., ಕೆ. ಕೇಶವ ಶರ್ಮ., ೧೯೯೨., ಅನ್ವೇಷಣೆ ಪ್ರಕಾಶನ, ಬೆಂಗಳೂರು., ಪು:೪

೬. ಶ್ರೀಮತಿ ಎಚ್.ಎಸ್. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ ಭಾಗ–೨, ಪು:೪೪,೪೫, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು–೨೦೧೧

೭. ಶ್ರೀಮತಿ ಎಚ್.ಎಸ್. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ ಭಾಗ–೨, ಪು:೪೬–೪೭, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು–೨೦೧೧

೮. ಶ್ರೀಮತಿ ಎಚ್.ಎಸ್. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ ಭಾಗ–೨, ಪು:೪೪, ೧೪, ಪು:೪೬–೪೭, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು–೨೦೧೧

೯. ಶ್ರೀಮತಿ ಎಚ್.ಎಸ್. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ ಭಾಗ–೨, ಪು:೪೪, ೧೪ ಪು:೪೮–೪೯, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು–೨೦೧೧

೧೦. ಶ್ರೀಮತಿ ಎಚ್.ಎಸ್. ಮಹಾಶ್ವೇತಾದೇವಿ ಅವರ ಕಥಾಸಾಹಿತ್ಯ ಭಾಗ–೨, ಪು:೬೩, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು–೨೦೧೧


DOI: 10.59176
http://www.kristujayantijournal.com/index.php/KJKSP